


ತನ್ನ ತಲೆದಸಿ ರಾತ್ರಿ ಮಲಗುವಾಗಲೆಲ್ಲ ಇಟ್ಟುಕೊಳ್ಳುವ ಸೀಮೆಎಣ್ಣೆ ಬುಡ್ಡಿಯನ್ನು ತೆಗೆದುಕೊಂಡು ಕಚ್ಚಿದ. ಸೂರಿನಲ್ಲಿ ಸಿಗಿಸಿದ್ದ ಸತ್ತ ದನದ ಚರ್ಮ ಸುಲಿಯಲು ಬಳಸುವ ಚೂರಿಯನ್ನು ತೆಗೆದು ಕೊಂಡು ಮಲಗಿದ್ದ ಗೊದ್ಲೆಯ ಪಕ್ಕ ಮಂಡಿಗಾಲಿನಲ್ಲಿ ಕುಳಿತು ಅವನ ಅಂಗಿಯ ಗುಂಡಿಗಳನ್ನು ನಿಧಾನವಾಗಿ ಸಡಿಲಿಸಿದ. ಜನಿವಾರವನ್ನು ಎಡಗೈ ಬೆರಳಲ್ಲಿ ನಿಧಾನವಾಗಿ ಮೇಲೆತ್ತಿ ಹಿಡಿದು ತುಂಡರಿಸಲು ಅದಕ್ಕೆ ಚೂರಿಯನ್ನು ಆನಿಸಿದ. ಗೊದ್ಲೆ ಪಟಕ್ಕನೆ ಕಣ್ಣು ಬಿಟ್ಟ. ತಪ್ಪಿತಸ್ಥ ಭಾವನೆಯಿಂದ ಮುಳ್ಕಟ್ಟನ ಮುಖ ಚಿಕ್ಕದಾಯಿತು. ಮೇಲೆದ್ದು ಕುಳಿತ ಗೊದ್ಲೆ.

ಕೈಯಲ್ಲಿ ಚೂರಿ ಹಿಡಿದು, ಮಂದ ಬೆಳಕಿನಲ್ಲಿ ಭಯ ಹುಟ್ಟಿಸುವಂತೆ ತನ್ನ ಬಳಿ ಕುಳಿತ್ತಿದ್ದ ಮುಳ್ಕಟ್ಟನನ್ನು ಹಾಗೂ ತನ್ನ ಅಂಗಿಯ ಗುಂಡಿಗಳು ಬಿಚ್ಚಿರುವುದನ್ನು ನೋಡಿದ ಗೊದ್ಲೆಗೆ ಎಲ್ಲ ಅರ್ಥವಾಯಿತು. ಕೇಳಿದ.

'ಅಪ್ಪಯ್ಯ, ನನ್ ಮೈಮೇಲಿಂದ ಜನಿವಾರ ತೆಗಿಯಾಕೆ ಬಂದಿದ್ದೀಯ?'

'ಹೂಂ ಮಗ. ರಾಮಸ್ವಾಮೇರು ಜನಿವಾರ ತೆಗೀದಿದ್ರೆ ನಿನ್ನ ಪೊಲೀಸ್ರಿಗೆ ಹಿಡ್ಕೊಡ್ತೀವಿ ಅಂತ ಯೋಳಿದ್ರು. ನಂಗೆ ಭಯ ಆಗಿ ಜನಿವಾರ ಕೂದು ತೆಗಿಯಾಕೆ ಅಂತ ಬಂದೆ'.

'ನಾನು ಬ್ರಾಹ್ಮಣನಾಗೋದು, ಜನ್ರಿಂದ ಗೌರವ ಪಡ್ಕಳದು ನಿಂಗೆ ಇಷ್ಟ ಇಲ್ವ ಅಪ್ಪಯ್ಯ?'

'ನೀನ್ಯಾಕ್ಲ ಬ್ರಾಂಬ್ರಾಗ್ಬೇಕು? ಬ್ರಾಂಬ್ರಿಗೆ ಮಾತ್ರ ಜನ್ರು ಗೌರವ ಕೊಡ್ತಾರಂತ ಯಾರ್ಲ ನಿಂಗೆ ಯೋಳಿದ್ದು? ನಮ್ಗೂ ಬೆಲೆ ಐತೆ ಕನ್ಲ. ನಂ ಕುಲಾನು ಯಾರ್ಗೇನು ಕಡ್ಮೆ ಇಲ್ಲ. ನಾವು ಅವ್ರ ಹೊಲ ಗದ್ದೇಲಿ ಗೇದ್ರೇನೆ ಅವ್ರ ವಾಡೆ ತುಂಬಾದು, ಅವ್ರ ಹಸುವು ಹಿಂಗಾದು. ನಾವು ಹೊಲ ಊಳಾದೆ ಧ್ಯಾನ, ಬೀಜ ಬಿತ್ತೋದೆ ಪೂಜೆ ಕನ್ಲ' ಎಂದು ವೇದಾಂತಿಯಂತೆ ಮಾತನಾಡಿದ. ಮುಳ್ಕಟ್ಟ, 'ನೀನಾಕ್ಕಂಡಿರೊ ಉಡ್ದಾರದಿಂದ ಚಡ್ಡಿನಾದ್ರು ಕಟ್ಕಬೌದು. ಜನಿವಾ ರ್ದಿಂದ ನಿಂಗೆ ಯೋನ್ಲ ಉಪ್ಯೋಗ? ಅದು ನಿನ್ನ ಮೈಯಲ್ಲಿ ಇರಾಗಂಟ ನಿಂಗೆ ಅಪಾಯ ತಪ್ಪಿದ್ದಲ್ಲ, ಬಿಚ್ಚಾಕ್ಲ ಅದ' ಎಂದು ಒತ್ತಾಯ